**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**ಸಿ.ಸಿ. ನಂ. 529/2025 ಫ್ರಾ.ಸಾ – 2**

**ಚಾ.ಸಾ – 2**

**ದಿನಾಂಕಃ 13.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಸಿ ಎಸ್ ರಮೇಶ್ |
| ತಂದೆಯ ಹೆಸರು | : | ಲೇಟ್ ಸುಬ್ಬಯ್ಯ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ವೆಸ್ಟ್ ನೆಮ್ಮಲೆ ಗ್ರಾಮ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ 1 ನನ್ನ ಹೆಂಡತಿ. ಚಾಸಾ 3 ನಮ್ಮ ಅತ್ತೆ. ಆರೋಪಿತರು ಪರಿಚಯ. ದಿ. 21.01.2025 ರಂದು ನಮ್ಮ ರಸ್ತೆಗೆ ಆರೋಪಿಗಳು ಹಿಟಾಚಿ ವಾಹನವನ್ನು ತಂದರು. ನಾನು ಹಿಟಾಚಿ ವಾಹನವನ್ನು ತರಲು ಬಿಡಲಿಲ್ಲ, ಆರೋಪಿಗಳು ನನಗೆ ಹೊಡೆದರು. ತಡೆಯಲು ನನ್ನ ಹೆಂಡತಿ ಚಾಸಾ 1 ರವರು ಬಂದಿದ್ದು ಗಲಾಟೆಯಲ್ಲಿ ಅವರ ಬಟ್ಟೆ ಹರಿದಿರುತ್ತದೆ. ನಂತರ ಶ್ರೀಮಂಗಲ ಪೊ. ಠಾಣೆಗೆ ಹೋಗಿ ನನ್ನ ಹೆಂಡತಿ ದೂರು ಕೊಟ್ಟಳು. ನಾನು ಮತ್ತು ನನ್ನ ಹೆಂಡತಿ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆವು. ಮರುದಿನ ಗಲಾಟೆಯ ಸ್ಥಳದಲ್ಲಿ ಪೊಲೀಸರು ಬಂದು ಮಹಜರ್ ಮಾಡಿದರು. ನನ್ನ ಚಿಕ್ಕಪ್ಪನ ಮಗ ಸತೀಶ್ ಅವರ ಗದ್ದೆಯಲ್ಲಿ ನಮ್ಮ ಮನೆಗೆ ಹೋಗಲು ರಸ್ತೆ ಮಾಡಿಕೊಂಡಿದ್ದು ಆ ಜಾಗದಲ್ಲಿ ಗಲಾಟೆ ಆಗಿರುತ್ತದೆ. ಸ್ಥಳದಲ್ಲಿ ಪೊಲೀಸರು ಫೋಟೋ ತೆಗೆದುಕೊಂಡರು. ನನ್ನ ಹೆಂಡತಿ ಗಲಾಟೆ ಸಮಯದಲ್ಲಿ ಧರಿಸಿದ್ದಂತಹ Meroon color ಚೂಡಿದಾರ್ ಟಾಪ್ ಅನ್ನು ಅಮಾನತುಪಡಿಸಿಕೊಂಡರು.

ಸಾಕ್ಷಿಯು ಮು ಮಾ 1ಅನ್ನು ನೋಡಿ ಗುರುತಿಸಿರುತ್ತಾರೆ. ಮಹಜರ್ ವೇಳೆ ಚಾಸಾ 4 ಮತ್ತು 5 ರವರು ಇದ್ದರು. ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ–**

ಆರೋಪಿಗಳು ನಾಯಿ ಸೂಳೆ ಮಗಳೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಮ್ಮನ್ನು ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ 1 ರವರಿಗೆ ಹೊಡೆದಿದ್ದು ಅವರ ಬಟ್ಟೆ ಗಲಾಟೆಯಲ್ಲಿ ಹರಿದಿದ್ದು ಅದರಿಂದ ಅವರ ಮಾನಕ್ಕೆ ಹಾನಿ ಉಂಟಾಗಿದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಸಿ ಪಿ ಪಿ. ವಕೀಲರಿಂದಃ**

ನಾನು ಹುಟ್ಟಿದಾಗಿನಿಂದ ಆಗ ಇದ್ದ ಮನೆಯಲ್ಲೇ ಈಗಲೂ ಇದ್ದೇನೆ. ಆರೋಪಿಗಳು ಹುಟ್ಟಿದಾಗಿದಿಂದ ಅವರು ಬೇರೆ ಅವರ ಮನೆಯಲ್ಲಿದ್ದಾರೆ. 1 ನೇ ಆರೋಪಿಗೆ ನಮ್ಮ ಮನೆಯ ಮುಂದೆ ಹಾದುಹೋಗುವ ರಸ್ತೆಯಲ್ಲಿ ಮುಂದೆ ಹೋದರೆ ಯಾವುದೇ ತೋಟವಿಲ್ಲ, ಅವರು ನನ್ನ ಚಿಕ್ಕಪ್ಪನ ತೋಟವನ್ನು ಒತ್ತುವರಿ ಮಾಡಿಕೊಂಡಿದ್ದು ನಮ್ಮ ಮನೆಯ ರಸ್ತೆ ಮುಂದೆಯೇ ಹೋಗಬೇಕಾಗುತ್ತದೆ. 2 ನೇ ಆರೋಪಿಯ ಮನೆ ನನ್ನ ಮನೆಯ ಪಕ್ಕ ಎಂದರೆ ಸರಿ. ಗಲಾಟೆಯ ರಸ್ತೆ ನಮ್ಮ ಹೆಸರಿನಲ್ಲಿ ಇರುವುದಕ್ಕೆ ದಾಖಲೆ ಇಲ್ಲ, ಅದು ನನ್ನ ಚಿಕ್ಕಪ್ಪನ ಮಗನ ಹೆಸರಿನಲ್ಲಿರುತ್ತದೆ. ತನಿಖಾದಿಕಾರಿಯವರಿಗೆ ಚಿಕ್ಕಪ್ಪನ ಮಗನ ಹೆಸರಿನಲ್ಲಿ ಆ ರಸ್ತೆ ಇರುವ ಜಾಗದ ಬಗಗೆ ದಾಖಲೆ ಕೊಟ್ಟಿಲ್ಲ. ಜೆಸಿಬಿ ವಾಹನದ ಸಂಖ್ಯೆ ಗೊತ್ತಿಲ್ಲ. ಜೆಸಿಬಿ ಚಾಲಕ ಇನ್ನೊಬ್ಬ ಅಲ್ಲಿದ್ದು ಆತನಿಗೆ ಆರೋಪಿಗಳು ನನ್ನ ಮೇಲೆ ಜೆಸಿಬಿ ಹತ್ತಿಸಿ ಎಂದು ಹೇಳಿರುತ್ತಾರೆ. ಜೆನಿಬಿ ಚಾಲಕನ ವಿರುದ್ದ ದೂರು ನೀಡಿಲ್ಲ.

ಆರೋಪಿಗಳು ಇಬ್ಬರು ನನ್ನನ್ನು ಹಿಡಿದು ತಳ್ಳಿದ ಬಗ್ಗೆ ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಹೇಳಿದ್ದೇನೆ. ಗಲಾಟೆ ಆಗಿದೆ ಎಂದು ಹೇಳುವ ರಸ್ತೆ ಚೊಟ್ಟೆಯಂಡಮಾಡ ಕುಟುಂಬದವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಈ ರಸ್ತೆಯ ವಿಚಾರ ನಮಗೂ ಆರೋಪಿಗಳ ನಡುವೆ ಈ ಹಿಂದೆ ಗಲಾಟೆ ಆಗಿದ್ದು ಟಿ ಶೆಟ್ಟಿಗೇರಿ ಗ್ರಾಮ ಪಂಚಾಯಿತಿಯಲ್ಲೂ ಕೂಡ ದೂರುಗಳು ದಾಖಲಾಗಿದೆ ಎಂದರೆ ಸರಿ. ಆರೋಪಿಗಳು ಗ್ರಾಮ ಪಂಚಾಯಿತಿ ಕಡೆಯಿಂದ ಅನುಮತಿ ಪಡೆದು ಗಲಾಟೆ ಆದ ರಸ್ತೆಯನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. ಬೆ. 11.30 ಒಳಗಡೆ ಪೊಲೀಸರಿಗೆ ದೂರು ನೀಡಿರುತ್ತೇವೆ. ದೂರು ಕೊಟ್ಟು ಆಸ್ಪತ್ರೆಗೆ ಹೋದೆವು ಎಂದರೆ ಸರಿ.

ನಾನು ಮತ್ತು ಚಾಸಾ 1 ರವರು ಆ ರಸ್ತೆಗೆ ಆ ವಾಹನ ಬಂದಾಗ ಒಟ್ಟಿಗೆ ಹೋಗಿರುತ್ತೇವೆ. ಮು ಮಾ 1 ನೇರಳೆ ಬಣ್ಣದ್ದು Meroon color ಅಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಮು ಮಾ 1 ಅನ್ನು ಹರಿದು ನಾವೇ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಅವಿವಾಹಿತರು ಎಂದರೆ ಸರಿ. ಆರೋಪಿಗಳ ಆಸ್ತಿಗಳ ಬಗ್ಗೆ ಗೊತ್ತಿಲ್ಲ. ಆರೋಪಿತರು ಅವರ ತೋಟಕ್ಕೆ ಹೋಗಲು ನಮ್ಮ ರಸ್ತೆಯನ್ನು ಉಪಯೋಗಿಸಬೇಕು ಎಂದರೆ ಸರಿ. ಅವರ ತೋಟಕ್ಕೆ ಅವರನ್ನು ಹೋಗದೆ ಮಾಡಿದರೆ ಆಸ್ತಿಯನ್ನು ಹೊಡೆದುಕೊಳ್ಳಬಹುದೆಂದು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಬಟ್ಟೆ ಹರಿದಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**sd/-**

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ